ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬಾಗೇಪಲ್ಲಿ

C.C.59 /2015 C.W.11 P.W.5

| | | |
|---|---|---|
| ಸಾಕ್ಷಿದಾರರ ಹೆಸರು | ಃ ಕಮಲ್ ಬಾಬು | |
| ತಂದೆ/ಗಂಡನ ಹೆಸರು | ಃಸಿ ಜಿ ಕುಳ್ಳಾಯ್ಯು | |
| ವಯಸ್ಸು | ಃ 37 | ಪ್ರಮಾಣೀಕರಿಸಲಾದ ದಿಃ28/11/17 |
| ವೃತ್ತಿ | ಃ ಮೋಟಾರು ವಾಹನ ತಪಾಸಣಾ ನಿರೀಕ್ಷಕರು | |
| ವಾಸಸ್ಥಳ | ಃ ಚಿಕ್ಕಬಳ್ಳಾಪುರ | |

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ04.03.14 ರಂದು ಬಾಗೇಪಲ್ಲಿ ಪೊ ಠಾ ಯಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಪಘಾತಕ್ಕೆ ಒಳಗೊಂಡ ಒಂದು ವಾಹನವನ್ನು ತಪಾಸಣೆ ಮಾಡಲು ಮನವಿ ಬಂದಿತ್ತು. 05.03.14 ರಂದು ನಾನು ಬಾಗೇಪಲ್ಲಿ ಪೊ ಠಾ ಯ ಆವರಣದಲ್ಲಿ ತಪಾಸಣೆ ಮಾಡಿರುತ್ತೇನೆ. ನಾನು ತಪಾಸಣೆ ಮಾಡಿದ ವಾಹನ ಕೆ ಎ 35 ಇ 6924 ದ್ವಿ ಚಕ್ರ ಆಗಿತ್ತು ಸದರಿ ವಾಹನದ ಮುಂಭಾಗದ ಹೆಡ್ ಲ್ಯಾಂಪ್ ಡೂಂ ಜಖಂಗೊಂಡಿದ್ದು ಮುಂಭಾಗದ ಎಡಭಾಗದಲ್ಲಿ ಇಂಡಿಕೇಟರ್ ಜಖಂಗೊಂಡಿದ್ದು. ಕ್ರಾಶ್ ಗಾರ್ಡ್ ಎಡಭಾಗಕ್ಕೆ ಬಾಗಿರುತ್ತದೆ. ಹಿಂಭಾಗದ ಬ್ರೇಕ್ ಲೈಟ್ Assembly ಮತ್ತು ಮುಂಭಾಗದ ಇಂಡಿಕೇಟರ್ ಜಖಂಗೊಂಡಿದ್ದು. ಸದರಿ ವಾಹನ ಸುಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ತದನಂತರ ಅಪಘಾತವೂ ಈ ವಾಹನದ ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ನನ್ನ ವರದಿಯನ್ನು ನೀಡಿರುತ್ತೇನೆ. ನಿ ಪಿ 6 ವರದಿ. ನಿ ಪಿ 6 ಎ ಸಹಿ.

**ಪಾಟೀ ಸವಾಲು ಮಾನ್ಯ ಶ್ರೀ** ಕೆ ಎಸ್ ಆರ್ **ವಕೀಲರಿಂದಃ**

ಯಾವುದೇ ವಾಹನ ಅಪಘಾತವಾಗದೆ ತನಷ್ಟಕ್ಕೆ ತಾನೇ ಎಡಗಡೆ ಬಿದ್ದ ಪಕ್ಷದಲ್ಲಿ ನನ್ನ ವರದಿಯಲ್ಲಿ ನಮೂದು ಮಾಡಿರುವಂತ ಜಖಂಗಳು ಆಗುವ ಸಾಧ್ಯತೆ ಇದೆ. ಅತಿವೇಗವಾಗಿ ಕಾರೊಂದು ಚಾಲನೆ ಮಾಡಿಕೊಂಡು ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ಸಂದಭರ್ದಲ್ಲಿ ನಾನು ನಮೂದಿಸಿರುವ ಜಖಂಗಳಿಗಿಂತ ಹೆಚ್ಚಿನ ಜಖಂಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಡಿಕ್ಕಿ ಪಡಿಸಿದ ವೇಗದ ಮೇಲೆ ಅದು ಅವಲಂಬಿತವಾಗಿರುತ್ತದೆ. ನನಗೆ ಅಪಘಾತ 05.02.14 ಕ್ಕೆ ಆಗಿರುತ್ತದೆ ಎಂದು ಸದರಿ ಮನವಿಯನ್ನು ನಮೂದಿಸಿತ್ತು. ಅಪಘಾತವಾದ ದಿನದಿಂದು ನಾನು ತಪಾಸಣೆ ಮಾಡುವ ಕಾಲದ ಮಧ್ಯದಲ್ಲಿ ಸದರಿ ವಾಹನಕ್ಕೆ ಏನಾದರು ಆಗಿದರೆ ಅದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲಃ**

**(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು.)**

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಫ್‌ಸಿ ಬಾಗೇಪಲ್ಲಿ